## ಮಂದಿರದ ಮೇಲೆ ಬುರುಜು

ಹನ್ನೊಂದನೇ ಶತಮಾನದಲ್ಲಿ ರಾಷ್ಟ್ರಕೂಟರ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿರುವ ಈ ರಾಮಲಿಂಗೇಶ್ವರ ದೇವಾಲಯವು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು ಬಿಳಿಚೋಡು ಗ್ರಾಮದಲ್ಲಿದೆ.

ಈ ಗ್ರಾಮವು ಚಿತ್ರದುರ್ಗವನ್ನು ಆಳಿದ ಬಿಚ್ಚುಗತ್ತಿ ಭರಮಣ್ಣನಾಯಕನ ಹುಟ್ಟೂರಾಗಿದೆ. ದೇವಾಲಯ ಬಳಸಿ ಬುರುಜು ಹಾಗೂ ಕಾವಲು ಗೋಪುರವನ್ನು ದೇವಾಲಯದ ಮೇಲ್ಭಾಗದಲ್ಲಿ ನಿರ್ಮಿಸಲಾಗಿದೆ. ದೇವಸ್ಥಾನ ಕೋಟೆಯ ಒಳಭಾಗದಲ್ಲಿ, ಹೊರಭಾಗದಲ್ಲಿ ಇರುತ್ತವೆ. ಆದರೆ ದೇವಾಲಯದ ಮೇಲೆ ಬುರುಜು ಇರುವುದು ಬಹಳಷ್ಟು ಅಪರೂಪ.

ಐತಿಹಾಸಿಕ ಬುರುಜ ಹಾಗೂ ದೇವಾಲಯವನ್ನು ಸಂರಕ್ಷಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಐತಿಹಾಸಿಕ ಕುರುಹಾಗಿ ಉಳಿದಿರುವ ಇದನ್ನು ಅವನತಿಗೆ ಸಾಗದಂತೆ ನೋಡಿಕೊಳ್ಳಬೇಕಾಗಿದೆ.

—ಕೆ.ವಿ. ಸಂತೋಷ್, ಹೊಳಲ್ಕೆರೆ






## ಚಳ್ಳಕಾಯಿ ಉಪ್ಪಿನಕಾಯಿ!

ಚಳ್ಳಕಾಯಿಯ ಗಿಡವನ್ನು ಬಹಳಷ್ಟು ಜನ ನೋಡಿರಲಿಕ್ಕಿಲ್ಲ. ಮಲೆನಾಡಿನಲ್ಲಿ ಹೆಚ್ಚು ಕಂಡುಬರುತ್ತದೆ. ಫೆಬ್ರುವರಿಯಿಂದ ಏಪ್ರೀಲ್ ಅವಧಿಯಲ್ಲಿ ಕಾಯಿ ಬಿಡುತ್ತವೆ. ಬೀಜದ ಸುತ್ತಲೂ ಅಂಟಾದ ಪದಾರ್ಥವಿರುತ್ತದೆ. ಕಾಯಿಯ ಸುತ್ತಲೂ ಹಸಿರಾದ ದಪ್ಪ ತೊಗಟೆಯಿರುತ್ತದೆ. ಉಪ್ಪಿನಕಾಯಿಯನ್ನು ಹಳ್ಳಿಗಳಲ್ಲಿ ಈಗಲೂ ತಯಾರಿಸುತ್ತಾರೆ. ರೊಟ್ಟಿ, ಅನ್ನದೊಂದಿಗೆ ತಿನ್ನಲು ರುಚಿಯಾಗಿರುತ್ತದೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು.

## ಅಪಾರ ಬುದ್ಧಿಶಕ್ತಿಯ ಬಾಲಕ

ಪುಟ್ಟಮಕ್ಕಳ ನೆನಪಿನ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ರಚನಾತ್ಮಕ ಆಟದ ಸಾಮಾನುಗಳನ್ನು ಕೊಡಿಸುತ್ತೇವೆ, ವಿವಿಧ ಚಟುವಟಿಕೆಗಳನ್ನು ಮಾಡಿಸುತ್ತೇವೆ. ಇಲ್ಲೊಬ್ಬ ಪೋರ ತನ್ನ ವಿಭಿನ್ನ ನೆನಪಿನ ಶಕ್ತಿಯಿಂದ ಎಲ್ಲರ ಗಮನ ಸೆಳೆದಿದ್ದಾನೆ. ಕೋಲಾರದ ಮಾಲೂರಿನ 22 ತಿಂಗಳ ಪುಟಾಣಿ ಜಿಷ್ಣು ತನ್ನ ಅಗಾಧಶಕ್ತಿಯ ಪ್ರತಿಭೆಯಿಂದ ಎಲ್ಲರ ಹುಬ್ಬೇರಿಸುವಂತೆ ಮಾಡಿದ್ದಾನೆ.

ಸಾವಿರಾರು ವಸ್ತುಗಳನ್ನು ಗುರುತಿಸುವುದರ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರಿಕೊಂಡಿದ್ದಾನೆ. ತನ್ನ ವಯಸ್ಸಿಗೆ ಮೀರಿ ವಾಹನಗಳನ್ನು, ಅವುಗಳ ಬಿಡಿಭಾಗಗಳನ್ನು, ಫಾರ್ಮಸಿ ವಸ್ತುಗಳನ್ನು ಒಳಗೊಂಡಂತೆ ಅನೇಕ ಹೂ, ಹಣ್ಣು, ಪ್ರಾಣಿ, ಪಕ್ಷಿ, ಹೀಗೆ ವಿವಿಧ ವಸ್ತುಗಳು ಗಣ್ಯವ್ಯಕ್ತಿಗಳನ್ನು ಗುರುತಿಸಿದ್ದಾನೆ. ಒಟ್ಟು ಐದು ನೂರಕ್ಕೂ ಹೆಚ್ಚು ವಸ್ತುಗಳನ್ನು, ಗಣ್ಯರನ್ನು ಗುರುತಿಸಿದ್ದು ಭಾರತ ದೇಶದ ಹೆಮ್ಮೆಯ ಪುಟಾಣಿಯೆಂದು ಕರೆಸಿಕೊಳ್ಳುತ್ತಿದ್ದಾನೆ.

—ಈರಣ್ಣ ಬೆಂಗಾಲಿ, ರಾಯಚೂರು

